ಬಂಗಾರದ ನಾಣ್ಯಗಳನ್ನು ತಂದುಕೊಟ್ಟೆ. ಯಾರೂ ಇಲ್ಲದೆ ಒಂಟಿಯಾಗಿದ್ದ ಈ ಮುದಿಜೀವ ಅಷ್ಟುದಿನ ಕೆಲಸ ಮಾಡಿ ಗಳಿಸಿ ಇಟ್ಟಿದ್ದ ಆ ಹಣ ಒಂದು ಕುಟುಂಬಕ್ಕೆ ನೆರವಾಗುತ್ತೆ ಅಂದುಕೊಂಡೆ. ಆದರೆ ಅದೇ ಶಾಪವಾಯಿತು. ಆ ದುರುಳ ತನ್ನ ಕಳ್ಳಬುದ್ಧಿ ತೋರಿಸಿದ. ಒಬ್ಬ ಬಡ ಮುದುಕಿ ಮನೆಯಲ್ಲಿ ಇಷ್ಟು ಹಣವಿರಬಹುದಾದರೆ ಇನ್ನು ಆ ಊರಿನ ಎಲ್ಲಾ ಮನೆಗಳಲ್ಲಿ ಎಷ್ಟಿರಬಹುದೆಂದು ಯೋಚಿಸಿದ. ಮರುದಿನ ರಾತ್ರಿಯೇ ತನ್ನ ಗುಂಪನ್ನು ಕರೆದುಕೊಂಡು ಬಂದು ಊರನ್ನೇ ಕೊಳ್ಳೆ ಹೊಡೆದ. ಆಗಷ್ಟೆ ಫಸಲು ಕೈಗೆ ಬಂದು ಖುಷಿಯಾಗಿದ್ದ ಮನೆಗಳು ಮರುದಿನ ಸ್ಮಶಾನಮೌನ ತಾಳಿದವು. ಅಂದಿನಿಂದ ಇಂದಿನವರೆಗೆ ಹೊರಗಿನವರು ಯಾರೇ ಬಂದರೂ ಈ ಊರಿನಲ್ಲಿ ಅತಿಥಿ ಸತ್ಕಾರವಿಲ್ಲವೆಂದು ಹೇಳಿದಳು. ನನ್ನಿಂದಲೇ ಇಷ್ಟೆಲ್ಲವಾದರೂ ಊರಜನ ನನಗೆ ಒಂದು ಮಾತೂ ಅನ್ನಲಿಲ್ಲ. ನನಗೇ ಸಂಕಟವಾಗಿ ಹೀಗೆ ಊರಿಂದ ಹೊರಗೆ ಇದ್ದೇನೆ.

ನಮ್ಮ ಮಹಾರಾಜರು ಎಲ್ಲವನ್ನೂ ಕೊಟ್ಟಿದ್ದಾರೆ ಆದರೆ ಅವುಗಳನ್ನು ಉಳಿಸಿಕೊಳ್ಳುವ ರಕ್ಷಣೆ ಕೊಟ್ಟಿಲ್ಲ ಎಂದು ಹೇಳಿದಳು. ತನ್ನ ಪ್ರಜೆಗಳಿಗೆ ಏನು ಕೊರತೆಯಿದೆಯೆಂದು ಅರಿತ ಮಹಾರಾಜರು. ಬೆಳಗಾಗುವುದರೊಳಗೆ ರಾಜ್ಯ ಸೇರಿದರು. ಆ ಊರಿಗೆ ಹತ್ತಿರವಿರುವ ದಂಡಕಾರಣ್ಯದಲ್ಲಿ ಇರುವ ಕಳ್ಳರ ಗುಂಪನ್ನು ಬಂಧಿಸಿ ಅವರು ದೋಚಿದ ನಗನಾಣ್ಯಗಳನ್ನು ಜನರಿಗೆ ಮರಳುವಂತೆ ಮಾಡಿದರು. ಊರೂರಿಗೆ ರಕ್ಷಕಭಟರನ್ನು ನೇಮಿಸಿದರು. ಇಷ್ಟೆಲ್ಲಾ ವಿಷಯ ತಿಳಿಯಲು ನೆರವಾದ ಆ ಅಜ್ಜಿಯನ್ನು ಅರಮನೆಗೆ ಕರೆಸಿದರು. ಆ ಅಜ್ಜಿ ಇಬ್ಬರನ್ನೂ ಗುರುತು ಹಿಡಿದಳು. ಅಜ್ಜಿ ನಾವೂ ಕಳ್ಳರಿರಬಹುದೆಂಬ ಅನುಮಾನ ಬರಲಿಲ್ಲವೇ? ಬ್ರಹ್ಮದತ್ತ ಕೇಳಿದ.

ನೀವು ನಮ್ಮ ಮಹಾರಾಜರೆಂದು ನನಗೆ ಗೊತ್ತಿತ್ತು ಎಂದಳು. ಅದು ಹೇಗೆ ಎಂದು ಕೇಳಿದರು. ನೀವು ಮಾರುವೇಷದಲ್ಲಿದ್ದರೂ ನಿಮ್ಮ ಕೈಗಿರುವ ರಾಜಮುದ್ರೆಯ ಉಂಗುರದಿಂದ ನಿಮ್ಮನ್ನು ಗುರುತು ಹಿಡಿದೆ. ಇನ್ನು ಯಾವಾಗಲೂ ನಿಮ್ಮ ಜೊತೆಗಿರುವ ಬ್ರಹ್ಮದತ್ತರ ಮಾತುಗಳಿಂದ ಅವರನ್ನೂ ಗುರುತಿಸಿದೆ. ನನ್ನಿಂದ ಬಂದ ಈ ಸಮಸ್ಯೆ ನನ್ನಿಂದಲೇ ಪರಿಹಾರವಾಗಲು ಆ ದೇವರು ಒಳ್ಳೆಯ ಅವಕಾಶ ಕೊಟ್ಟನೆಂದು ಅನಿಸಿತು. ಅದಕ್ಕೆ ನಮ್ಮ ಸಮಸ್ಯೆಯ ಬಗ್ಗೆಯೂ ಹೇಳಿದೆ. ತಪ್ಪಾಗಿದ್ದರೆ ಕ್ಷಮಿಸಿ ಮಹಾರಾಜ ಎಂದಳು. ನನ್ನ ಜವಾಬ್ದಾರಿಯನ್ನು ತಿಳಿಸಿದ ಸಲುವಾಗಿ ನಾನೇ ಧನ್ಯವಾದಗಳನ್ನು ಹೇಳಬೇಕೆಂದು, ಅಜ್ಜಿಗೆ ಸನ್ಮಾನಿಸಿ ಕಳುಹಿಸಿದರು ■

## ಕುಂಚ ಪ್ರಪಂಚ





**ವಿಶ್ರುತಾ ಎನ್.**
2ನೇ ತರಗತಿ,
ಯೂರೊ ಸ್ಕೂಲ್,
ಬೆಂಗಳೂರು





**ಸೌಂದರ್ಯ ಎಂ.**
8ನೇ ತರಗತಿ,
ಜ್ಞಾನಭಾರತಿ ಶಾಲೆ
ಗಿಣಿಗೇರಾ, ಕೊಪ್ಪಳ

'ಸುಧಾ' ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಅವರೇ ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ಅವರ ವೈಯಕ್ತಿಕ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in